## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:802
ಸದಸ್ಯರ ಹೆಸರು :ಶ್ರೀ ಶಶೀಲ್ ಜಿ. ನಮೋಶಿ
ಉತ್ತರಿಸುವ ಸಚಿವರು :ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ :21.02.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಆದಾಯವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಆದಾಯವನ್ನು ಹೆಚ್ಚಿಸಲು ಕೈಗೊಂಡಿರುವ ಕ್ರಮಗಳ ವಿವರವನ್ನು **ಅನುಬಂಧ-ಅ** ದಲ್ಲಿ ನೀಡಲಾಗಿದೆ. |
| ಆ. | ಸಾರಿಗೆ ಇಲಾಖೆಯು ಕೋರಿಯರ್ ಸೇವೆಯನ್ನು ಆರಂಭಿಸಿದೆಯೇ; ಕೋರಿಯರ್ ಸೇವೆಯನ್ನು ಯಾವ ಯಾವ ನಗರಗಳಿಗೆ ವಿಸ್ತರಿಸಲಾಗುವುದು; | ಹೌದು.<br><br>ಪಾರ್ಸಲ್ ಯೋಜನೆಯನ್ನು ದಿನಾಂಕ:01.03.2021 ರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಪ್ರಾರಂಭಿಸಲಾಗಿದೆ.<br><br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯ 56 ಜಿಲ್ಲಾ ಸ್ಥಳಗಳಲ್ಲಿ, 97 ತಾಲ್ಲೂಕ/ಸ್ಥಳೀಯ ಸ್ಥಳಗಳಲ್ಲಿ ಹಾಗೂ 53 ಅಂತರರಾಜ್ಯದ ಸ್ಥಳಗಳಲ್ಲಿ ಒಟ್ಟು 206 ಪಾರ್ಸಲ್ ಕೌಂಟರ್‌ಗಳನ್ನು ಪ್ರಾರಂಭಿಸಲಾಗಿದೆ.<br><br>ನಿಗಮಗಳ ವ್ಯಾಪ್ತಿಯಲ್ಲಿ ವ್ಯವಹಾರ ಅವಕಾಶಗಳ ಸಾಮರ್ಥ್ಯ ಹಾಗೂ ಸಾರಿಗೆಗಳ ಲಭ್ಯತೆ ಅನುಗುಣವಾಗಿ ಉಳಿದ ನಗರಗಳಿಗೂ ವಿಸ್ತರಿಸಲಾಗುವುದು. |
| ಇ. | ಕೊರಿಯರ್ ಸೇವೆಯಡಿ ವಿಧಿಸುತ್ತಿರುವ ಶುಲ್ಕಗಳೆಷ್ಟು; (ಮಾಹಿತಿ ಒದಗಿಸುವುದು) | ಕೊರಿಯರ್ ಸೇವೆಯಡಿ ವಿಧಿಸುತ್ತಿರುವ ಶುಲ್ಕಗಳ ವಿವರಗಳನ್ನು **ಅನುಬಂಧ-ಆ** ದಲ್ಲಿ ನೀಡಲಾಗಿದೆ. |
| ಈ. | ಹಬ್ಬದ ಹರಿ ದಿನಗಳ ಸಂದರ್ಭಗಳಲ್ಲಿ ಖಾಸಗಿ ಬಸ್ಸುಗಳು ಪ್ರಯಾಣಿಕರಿಗೆ ದುಪ್ಪಟ್ಟು ದರಗಳನ್ನು ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇಲಾಖೆಯ ಮೂಲಕವೇ ಹೆಚ್ಚಿನ ಬಸ್ಸುಗಳ ವ್ಯವಸ್ಥೆಯನ್ನು ಮಾಡಬಹುದಲ್ಲವೇ? (ವಿವರ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಪ್ರತಿ ಹಬ್ಬ-ಹರಿ ದಿನಗಳು ಹಾಗೂ ಸಾಲು ಸಾಲು ಸರ್ಕಾರಿ ರಜೆಗಳು ಬಂದ ಸಂದರ್ಭಗಳಲ್ಲಿ ಇಲಾಖೆ ವತಿಯಿಂದ ಇಂತಹ ಪ್ರಕರಣಗಳಲ್ಲಿ ಪ್ರವರ್ತನ ಚಟುವಟಿಕೆಗಳನ್ನು ಕೈಗೊಳ್ಳ ಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಹಬ್ಬದ ದಿನಗಳಲ್ಲಿ ದೈನಂದಿನ ಕಾರ್ಯಾಚರಣೆಯಲ್ಲಿರುವ ಸಾರಿಗೆಗಳ ಜೊತೆಗೆ ಪ್ರಯಾಣಿಕರ ಒತ್ತಡಕ್ಕನುಗುಣವಾಗಿ ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿರುತ್ತದೆ.<br><br>ಇತ್ತೀಚಿನ 2023ನೇ ಸಾಲಿನ ದೀಪಾವಳಿ, ಕ್ರಿಸ್‌ಮಸ್ ಹಾಗೂ 2024ನೇ ಸಾಲಿನ ಸಂಕ್ರಾಂತಿ ಹಬ್ಬದ ಸಮಯದಲ್ಲಿ ದೈನಂದಿನ ಸಾರಿಗೆಗಳ ಕಾರ್ಯಾಚರಣೆಯ ಜೊತೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 2684, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ 1460 ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವತಿಯಿಂದ 1773 ವಿಶೇಷ ಹೆಚ್ಚುವರಿ ಬಸ್ಸುಗಳನ್ನು ಬೆಂಗಳೂರಿನಿಂದ ರಾಜ್ಯದೊಳಗೆ ಹಾಗೂ ಅಂತರರಾಜ್ಯಗಳ ವಿವಿಧ ಸ್ಥಳಗಳಿಗೆ ಕಾರ್ಯಾಚರಣೆ ಮಾಡಲಾಗಿರುತ್ತದೆ. ಅಲ್ಲದೇ, ಸದರಿ ಹಬ್ಬಗಳ ಸಮಯದಲ್ಲಿ ಕ್ರಮವಾಗಿ 475, 435 ಹಾಗೂ 1036 ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವಾಹನಗಳನ್ನು ಬೆಂಗಳೂರಿನಿಂದ ರಾಜ್ಯದ ವಿವಿಧ ಸ್ಥಳಗಳಿಗೆ ಕಾರ್ಯಾಚರಣೆ ಮಾಡಲಾಗಿರುತ್ತದೆ.<br><br>ಪ್ರತಿ ವಾರಾಂತ್ಯ, ವಿಶೇಷ ದಿನಗಳು ಮತ್ತು ಹಬ್ಬ-ಹರಿದಿನಗಳಂದು ಬೆಂಗಳೂರಿನಿಂದ ಮತ್ತು ವಿವಿಧ ಜಿಲ್ಲಾ ಕೇಂದ್ರಗಳಿಂದ ಅವಶ್ಯಕತೆ ಅನುಗುಣವಾಗಿ ವಾರಾಂತ್ಯ ದಿನಗಳಲ್ಲಿ 500 ರಜೆ/ವಿಶೇಷ ದಿನಗಳಲ್ಲಿ 1000 ಮತ್ತು ಹಬ್ಬ-ಹರಿದಿನಗಳಲ್ಲಿ 2000 ಹೆಚ್ಚುವರಿ ಬಸ್ಸುಗಳನ್ನು ಆಚರಣೆ ಮಾಡಲು ಪೂರ್ವಭಾವಿಯಾಗಿ ಯೋಜಿಸಿ ಅದರಂತೆ ಕ್ರಮವಹಿಸಲಾಗುತ್ತಿದೆ.<br><br>ಇಲಾಖೆಯ ಮೂಲಕವೇ ಹೆಚ್ಚಿನ ಬಸ್ಸುಗಳ ವ್ಯವಸ್ಥೆಯನ್ನು ಮಾಡಲು ಕೆಳಕಂಡಂತೆ ಕ್ರಮಕೈಗೊಳ್ಳಲಾಗುತ್ತಿದೆ.<br><br>**<u>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ</u>**<br><br>ನಿಗಮದಿಂದ ಕಳೆದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ ಹಾಗೂ 7 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಬಸ್ಸುಗಳನ್ನು ಖರೀದಿಸಲು / ಜಿ.ಸಿ.ಸಿ ಆಧಾರದ ಮೇಲೆ ಕಾರ್ಯಾಚರಿಸಲು ಪ್ರಕ್ರಿಯೆ ಜಾರಿಯಲ್ಲಿರುತ್ತದೆ:<br><br>• ಸರ್ಕಾರದಿಂದ ನಿಗಮಕ್ಕೆ ವಿಶೇಷ ಬಂಡವಾಳ ನೆರವಿನಡಿ ಒದಗಿಸಿರುವ ರೂ.100.00 ಕೋಟಿಗಳ ಅನುದಾನದಲ್ಲಿ ಕರ್ನಾಟಕ ಸಾರಿಗೆ ಸಾಮಾನ್ಯ ಮಾದರಿಯ ಒಟ್ಟು 250 ಸಂಖ್ಯೆ ಹೊಸ ವಾಹನಗಳನ್ನು ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನ ರೂ.6235.44 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>• 25 ಹೊಸ ಸಾಮಾನ್ಯ ಕರ್ನಾಟಕ ಸಾರಿಗೆ ಮಾದರಿ ಬಸ್ಸುಗಳ ಖರೀದಿ.<br>• 100 ಹೊಸ ಸಾಮಾನ್ಯ ಬಸ್ಸುಗಳ ಖರೀದಿ.<br>• 200 ಹೊಸ ಸಾಮಾನ್ಯ ಬಸ್ಸುಗಳ ಖರೀದಿ.<br>• 40 ಪಲ್ಲಕ್ಕಿ ನಾನ್-ಎ.ಸಿ. ಸ್ಲೀಪರ್ ಬಸ್ಸುಗಳ ಖರೀದಿ.<br>• 04 ಎ.ಸಿ. ಮತ್ತು 04 ನಾನ್-ಎ.ಸಿ. ಸ್ಲೀಪರ್ ಬಸ್ಸುಗಳ ಖರೀದಿ.<br>• 300 ಸಂಖ್ಯೆ ವಿದ್ಯುತ್ ಚಾಲಿತ ವಾಹನಗಳನ್ನು ಜಿ.ಸಿ.ಸಿ ಆಧಾರದಲ್ಲಿ ಕಾರ್ಯಾಚರಣೆ ಬಸ್ಸುಗಳ ಖರೀದಿ.<br>• 350 ಸಂಖ್ಯೆ ಸಾಮಾನ್ಯ ಬಸ್ಸುಗಳ ಖರೀದಿ.<br><br>ಪ್ರಸ್ತುತ, ನಿಗಮದಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ 2000 ಚಾಲಕ-ಕಂ-ನಿರ್ವಾಹಕ ಹುದ್ದೆ ಹಾಗೂ 300 ತಾಂತ್ರಿಕ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.<br><br>-<br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಸಂಸ್ಥೆಯಿಂದ ಕಳೆದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ ಮತ್ತು ನೇಮಕಾತಿ ಆಗಿರುವುದಿಲ್ಲ.<br><br>ಪ್ರಸಕ್ತ ಸಾಲಿನಲ್ಲಿ ಸಾರಿಗೆ ಸೌಲಭ್ಯಗಳ ಕೊರತೆಯನ್ನು ನೀಗಿಸಲು ಈ ಕೆಳಗಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ:-<br><br>• 50 ಗ್ರಾಮಾಂತರ ಸಾರಿಗೆ ಬಸ್ಸುಗಳ ಖರೀದಿ.<br>• ಗ್ರಾಮಾಂತರ ಸಾರಿಗೆಯ 285 ಹೊಸ ಬಸ್ಸುಗಳ ಖರೀದಿ.<br>• ಸರ್ಕಾರದಿಂದ ಸಂಸ್ಥೆಗೆ ವಿಶೇಷ ಬಂಡವಾಳ ನೆರವಿನಡಿ ಒದಗಿಸಿರುವ ರೂ.150.00 ಕೋಟಿಗಳ ಅನುದಾನ ಸುಮಾರು 375 ಸಂಖ್ಯೆ ಗ್ರಾಮಾಂತರ ಸಾರಿಗೆಗಳನ್ನು ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನ ರೂ.9353.16 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>• ಡಲ್ಟ್ ಆರ್ಥಿಕ ಸಹಾಯದಿಂದ 100 ನಗರ ಸಾರಿಗೆ ಬಸ್ಸುಗಳ ಖರೀದಿ.<br>• 20-ನಾನ್ ಎ/ಸಿ ಸ್ಲೀಪರ್ ಹಾಗೂ 04-ಎ/ಸಿ ಸ್ಲೀಪರ್ ಬಸ್ಸುಗಳ ಖರೀದಿ.<br><br>ಸಂಸ್ಥೆಯಲ್ಲಿ ಪ್ರಸ್ತುತ 2000 ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ವಹಿಸಲಾಗುತ್ತಿದೆ.<br><br>**<u>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ</u>**<br><br>ನಿಗಮದಿಂದ ಕಳೆದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ ಹಾಗೂ ನೇಮಕಾತಿ ಆಗಿರುವುದಿಲ್ಲ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಪ್ರಸಕ್ತ ಸಾಲಿನಲ್ಲಿ ಸಾರಿಗೆ ಸೌಲಭ್ಯಗಳ ಕೊರತೆಯನ್ನು ನೀಗಿಸಲು ಈ ಕೆಳಗಿನಂತೆ ಕ್ರಮ ಕೈಗೊಳ್ಳಲಾಗುತ್ತಿದೆ:-<br><br>• ಸರ್ಕಾರದಿಂದ ನಿಗಮಕ್ಕೆ ವಿಶೇಷ ಬಂಡವಾಳ ನೆರವಿನಡಿ ಒದಗಿಸಿರುವ ರೂ.100.00 ಕೋಟಿಗಳ ಅನುದಾನದಲ್ಲಿ ಪೂರ್ಣ ಕವಚ ನಿರ್ಮಿತ 250 ವೇಗದೂತ ಸಾರಿಗೆಗಳನ್ನು ಖರೀದಿಸಲು ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಿನ ಅನುದಾನ ರೂ.6235.44 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>• ಪೂರ್ಣ ಕವಚ ನಿರ್ಮಿತ 123 ನಗರ ಸಾರಿಗೆ ಬಸ್ಸುಗಳನ್ನು ಡಲ್ಟ್ ಆರ್ಥಿಕ ಸಹಾಯದಿಂದ ಖರೀದಿಸಲು ಮಂಜೂರಾತಿ ದೊರೆತಿದ್ದು, ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>• 06 ವೋಲ್ವೋ ಎ.ಸಿ. ಸ್ಲೀಪರ್ ಕೋಚ್, 02 ಎ.ಸಿ. ಸ್ಲೀಪರ್ ಕೋಚ್, 14 ನಾನ್-ಎ.ಸಿ. ಸ್ಲೀಪರ್ ಕೋಚ್ ಮತ್ತು 612 ಗ್ರಾಮಾಂತರ ಸಾರಿಗೆ ಬಸ್ಗಳನ್ನು ಖರೀದಿಸಲಾಗಿದೆ.<br><br>ನಿಗಮದಲ್ಲಿ 925-ಚಾಲಕ ಮತ್ತು 694-ಚಾಲಕ-ಕಂ-ನಿರ್ವಾಹಕ ಹುದ್ದೆಗಳು ಸೇರಿದಂತೆ ಒಟ್ಟು 1619 ಚಾಲನಾ ಹುದ್ದೆಗಳ ನೇಮಕಾತಿಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ:03.02.2024ರಂದು ಪ್ರಕಟಿಸಲಾಗಿದ್ದು, ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ:12.02.2024ರವರೆಗೆ ಅವಕಾಶ ನೀಡಲಾಗಿರುತ್ತದೆ. ಶೀಘ್ರವೇ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು.<br><br>300-ನಿರ್ವಾಹಕ ಮತ್ತು 15-ಸಹಾಯಕ ಲೆಕ್ಕಿಗ ಹುದ್ದೆಗಳ ನೇರ ನೇಮಕಾತಿಗಾಗಿ ಜಾಹೀರಾತು ಹೊರಡಿಸಲು ಕ್ರಮ ಜರುಗಿಸಲಾಗುತ್ತಿದೆ.<br><br>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 36-ಹಿಂಬಾಕಿ ಹುದ್ದೆಗಳ ನೇರ ನೇಮಕಾತಿಗೆ ಜಾಹೀರಾತು ಅಧಿಸೂಚನೆ ಹೊರಡಿಸಲಾಗಿದೆ ಹಾಗೂ 51-ಗಣಕ |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | ಸಹಾಯಕ ಮತ್ತು 08-ಅಂಕಿಅಂಶ ಸಹಾಯಕ ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: ಟಿಡಿ 49 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)

ಸಾರಿಗೆ ಮತ್ತು ಮುಜರಾಯಿ ಸಚಿವರು

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಆದಾಯವನ್ನು ಹೆಚ್ಚಿಸಲು ಕೈಗೊಂಡಿರುವ ಕ್ರಮಗಳ ವಿವರಗಳು

- ಕ.ರಾ.ರ.ಸಾ.ನಿಗಮದ ವತಿಯಿಂದ ಸಾಮಾನ್ಯ, ನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಅಶ್ವಮೇಧ ಕ್ಲಾಸಿಕ್, ರಾಜಹಂಸ, ಐರಾವತ, ಎ.ಸಿ ಸ್ಲೀಪರ್, ನಾನ್ ಎಸಿ ಸ್ಲೀಪರ್, ಪಲ್ಲಕ್ಕಿ, ಐರಾವತ ಕ್ಲಬ್‌ಕ್ಲಾಸ್, ಫ್ಲೈ-ಬಸ್, ಅಂಬಾರಿ ಡ್ರೀಮ್‌ಕ್ಲಾಸ್, ಅಂಬಾರಿ ಉತ್ಸವ ಮುಂತಾದ ಪ್ರತಿಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

- ನಿಗಮವು ಒಟ್ಟು 16 ನಗರಗಳಲ್ಲಿ ಅಂದರೆ ತುಮಕೂರು, ಮೈಸೂರು, ಹಾಸನ, ಮಂಡ್ಯ, ರಾಮನಗರ, ಮಂಗಳೂರು, ಉಡುಪಿ, ಕೋಲಾರ, ಕೆ.ಜಿ.ಎಫ್., ದಾವಣಗೆರೆ, ಶಿವಮೊಗ್ಗ, ಭದ್ರಾವತಿ, ಚಿತ್ರದುರ್ಗ, ಮತ್ತು ಚಿಕ್ಕಮಗಳೂರು ನಗರಗಳಲ್ಲಿ ನಗರ ಸಾರಿಗೆಗಳನ್ನು ನಗರ ಮತ್ತು ಹೊರವಲಯಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.
- ಕ.ರಾ.ರ.ಸಾ ನಿಗಮವು ಟಿಕೆಟ್ ವಿತರಣೆಯಲ್ಲಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಇ.ಟಿ.ಎಂ (Electronic Ticketing Machine)ಜಾರಿಗೆ ತಂದಿರುತ್ತದೆ.
- ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೈಸೂರು, ಮಂಗಳೂರು-ಉಡುಪಿ-ಕುಂದಾಪುರ, ಕುಶಾಲನಗರ-ಮಡಿಕೇರಿಗೆ ನೇರ ಸಂಪರ್ಕ ಕಲ್ಪಿಸಲು **"Fly bus"** ಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.
- ಸಾರ್ವಜನಿಕ ಪ್ರಯಾಣಿಕರಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಅನುಕೂಲಕ್ಕಾಗಿ ನಿಗಮವು ಅವತಾರ್ (ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಟಿಕೆಟು ಕಾಯ್ದಿರಿಸುವಿಕೆ) ಗಣಕೀಕೃತ ಮುಂಗಡ ಬುಕಿಂಗ್ ಯೋಜನೆ ಜಾರಿಗೊಳಿಸಿದ್ದು, ರಾಜ್ಯದ ಹಾಗೂ ಹೊರ ರಾಜ್ಯಗಳ ಪ್ರಮುಖ ಸ್ಥಳಗಳಲ್ಲಿ ನಿಗಮದ ಕೌಂಟರುಗಳು/ಖಾಸಗಿ ಬುಕಿಂಗ್ ಏಜೆಂಟರುಗಳ ಮೂಲಕ ಮುಂಗಡ ಟಿಕೆಟ್ ಬುಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
- ಕರಾರಸಾ ನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಗುಂಪಾಗಿ (ಅಂದರೆ ನಾಲ್ಕು ಜನ ಮತ್ತು ಅದಕ್ಕೆ ಮೇಲ್ಪಟ್ಟು) ಕಾಯ್ದಿರಿಸಿದಲ್ಲಿ ಶೇ.5 ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ ಹಾಗೂ ಮುಂಗಡ ಆಸನವನ್ನು ಹೋಗುವ ಮತ್ತು ಬರುವ (Onward/Return) ಒಮ್ಮೆಲೆ ಕಾಯ್ದಿರಿಸಿದಲ್ಲಿ ಬರುವ (Return)ಪ್ರಯಾಣಕ್ಕೆ ಶೇ.10 ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ.
- ಕರಾರಸಾ ನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಜಿ.ಪಿಆರ್‌ಎಸ್ ಸೌಲಭ್ಯವುಳ್ಳ ಮೊಬೈಲ್ ದೂರವಾಣಿ ಮೂಲಕ ಮುಂಗಡ ಟಿಕೆಟು ಕಾಯ್ದಿರಿಸುವ ಎಂ-ಬುಕಿಂಗ್ ಮತ್ತು ಇ-ಬುಕಿಂಗ್ ವ್ಯವಸ್ಥೆ ಜಾರಿಗೊಳಿಸಿದೆ ಹಾಗೂ ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಆಪ್ ಮೂಲಕ ಮುಂಗಡ ಟಿಕೆಟು ಕಾಯ್ದಿರಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸದರಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಎಲ್ಲಾ ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳ ಮೂಲಕ ಹಣ ಪಾವತಿಸಲು ಅವಕಾಶ ಕಲ್ಪಿಸಿದ್ದು, ಈ ಸಂಬಂಧ ತಗಲುವ ಗೇಟ್‌ವೇ ಶುಲ್ಕವನ್ನು ಪ್ರಯಾಣಿಕರಿಂದ ಪಡೆಯುತ್ತಿರುವುದಿಲ್ಲ.
- ಕೌಂಟರ್‌ಗಳ ಮೂಲಕ ಮುಂಗಡ ಟಿಕೆಟ್ ಕಾಯ್ದಿರಿಸಿರುವ ಟಿಕೆಟ್‌ಗಳಿಗೆ ಪ್ರಯಾಣವನ್ನು ಮುಂದೂಡುವ ಮತ್ತು ಹಿಂದೂಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
- ಒಂಟಿಯಾಗಿ ಪ್ರಯಾಣ ಮಾಡುವ ಮಹಿಳೆಯರಿಗಾಗಿ, ಮಹಿಳೆಯರು ಮಾತ್ರ ಕಾಯ್ದಿರಿಸಬಹುದಾದ ಆಸನಗಳ ವ್ಯವಸ್ಥೆ ಕಲ್ಪಿಸಲಾಗಿದೆ.
- ನಿಗಮದ ಸಾರಿಗೆಗಳಲ್ಲಿ ಮುಂಗಡ ಕಾಯ್ದಿರಿಸಿರುವ ಪ್ರಯಾಣಿಕರಿಗೆ ಪ್ರಯಾಣ ವೇಳೆಯ ಎರಡು ಗಂಟೆಯ ಮುಂಚಿತವಾಗಿ ನಗರ ಸಾರಿಗೆಗಳಿರುವ ನಗರಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.
- ಮುಂಗಡವಾಗಿ ಸೀಟು ಕಾಯ್ದಿರಿಸುವ ಪ್ರಯಾಣಿಕರಿಗೆ ಅವರುಗಳು ಪ್ರಯಾಣ ಮಾಡುವ ವಾಹನ ಸಂಖ್ಯೆ, ನಿರ್ಗಮನದ ಸಮಯ ಹಾಗೂ ಸದರಿ ವಾಹನದಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಯ ಮೊಬೈಲ್ ಸಂಖ್ಯೆ ಗಳನ್ನು ಎಸ್.ಎಂ.ಎಸ್. ಮೂಲಕ ಮಾಹಿತಿಯನ್ನು ಒದಗಿಸಲಾಗುತ್ತಿದೆ.

- ಪ್ರಯಾಣಿಕರ ಅನುಕೂಲಕ್ಕಾಗಿ ಆನ್‌ಲೈನ್ ಅಥವಾ ಮೊಬೈಲ್ ಮೂಲಕ ಟಿಕೆಟನ್ನು ಕಾಯ್ದಿರಿಸಿ, ಎಂ-ಟಿಕೆಟನ್ನು ಲ್ಯಾಪ್‌ಟಾಪ್/ಐಪ್ಯಾಡ್/ಟ್ಯಾಬ್ಲೆಟ್ ಅಥವಾ ಮೊಬೈಲ್ ಫೋನ್‌ನಲ್ಲಿ ತೋರಿಸಿ ಪ್ರಯಾಣಿಸಲು ಅನುವು ಮಾಡಿಕೊಡಲಾಗಿದೆ.
- ಸಾರ್ವಜನಿಕ ಪ್ರಯಾಣಿಕರು ನಿಲ್ದಾಣವಾರು ವಾಹನಗಳ ನಿರ್ಗಮನಗಳ ಮಾಹಿತಿ ಪಡೆಯಲು ಮೈಸೂರು ನಗರದ ನಗರ ಸಾರಿಗೆ ವಾಹನಗಳಲ್ಲಿ ಐ.ಟಿ.ಎಸ್ (ಇಂಟೆಲಿಜೆಂಟ್ ಟ್ರ್ಯಾನ್ಸ್‌ಪೋರ್ಟ್ ಸಿಸ್ಟಮ್) ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಸದರಿ ವಾಹನಗಳಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ನಿಲ್ದಾಣವಾರು ಘೋಷಣೆಯ ವ್ಯವಸ್ಥೆಯನ್ನು ಅಳವಡಿಸಲಾಗಿದೆ.(ಪ್ಯಾಸೆಂಜರ್ ಅನೌನ್ಸಮೆಂಟ್ ಸಿಸ್ಟಮ್).
- ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ನಿಗಮದ ಪ್ರಮುಖ 107 ಬಸ್ ನಿಲ್ದಾಣಗಳಲ್ಲಿ ವಾಹನಗಳ ಸಂಖ್ಯೆ, ನಿರ್ಗಮನದ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ತಿಳಿಸಲಾಗುತ್ತಿದೆ.
- ಕ.ರಾ.ರ.ಸಾ.ನಿಗಮದ ವತಿಯಿಂದ ಪ್ರಮುಖ ಪ್ರವಾಸಿ ತಾಣಗಳಿಗೆ ಪ್ಯಾಕೇಜ್ ಟೂರ್‌ಗಳನ್ನು ಆಚರಣೆ ಮಾಡಲಾಗುತ್ತಿದೆ.
- ಸಾರಿಗೆ ನಿಗಮಗಳ ಆದಾಯ ವೃದ್ಧಿಯ ಭಾಗವಾಗಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಪಾರ್ಸಲ್ ಸೇವೆಗಳನ್ನು ದಿನಾಂಕ.01.03.2021 ರಿಂದ ಪ್ರಾರಂಭಿಸಲಾಗಿದೆ. ಮುಂದುವರೆದು, ದಿನಾಂಕ: 23.12.2023 ರಿಂದ ನಮ್ಮ ಕಾರ್ಗೋ ಟ್ರಕ್ ಸೇವೆಗಳನ್ನು ಪರಿಚಯಿಸಿ ಸಾರಿಗೇತರ ಆದಾಯ ಹೆಚ್ಚಿಸಲು ಕ್ರಮವಹಿಸಲಾಗುತ್ತಿದೆ.
- ನಿಗಮದ ಖಾಲಿ ನಿವೇಶನಗಳಲ್ಲಿ ಪೆಟ್ರೋಲಿಯಂ ಔಟ್‌ಲೆಟ್‌ಗಳನ್ನು ತೆರೆಯಲು ಸಾರ್ವಜನಿಕ ಸ್ವಾಮ್ಯದ ಆಸಕ್ತ ತೈಲ ಕಂಪನಿಯವರುಗಳಿಂದ ಟೆಂಡರ್ ಮೂಲಕ ಬಿಡ್‌ನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
- ಸಾರ್ವಜನಿಕ ಬೇಡಿಕೆಗನುಗುಣವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಾಂದರ್ಭಿಕ ಒಪ್ಪಂದದ ಬಸ್ಸುಗಳನ್ನು ಒದಗಿಸಲಾಗುತ್ತಿದೆ..
- ಖಾಲಿಯಿರುವ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರ ಆಯ್ಕೆ ಪ್ರಕ್ರಿಯೆ ನಿರಂತರವಾಗಿ ಚಾಲ್ತಿಯಲ್ಲಿರುತ್ತದೆ.
- ದಿನಾಂಕ:11.06.2023 ರಿಂದ ರಾಜ್ಯದಲ್ಲಿ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆಯನ್ನು ಜಾರಿಗೆ ತಂದಿದ್ದು, ಇದರಡಿಯಲ್ಲಿ ರಾಜ್ಯದ ಮಹಿಳಾ ಪ್ರಯಾಣಿಕರ ಉಚಿತ ಪ್ರಯಾಣ ಬಾಬತ್ತಿನ ವೆಚ್ಚವನ್ನು ಸರ್ಕಾರವು ಪೂರ್ಣ ಪ್ರಮಾಣದಲ್ಲಿ ಬಿಡುಗಡೆಗೊಳಿಸುತ್ತಿರುವುದಿಲ್ಲ. ಈ ಬಾಬತ್ತಿನ ಕೊರತೆ ಮೊತ್ತವನ್ನು ಸರ್ಕಾರದಿಂದ ಒದಗಿಸಿಕೊಡುವಂತೆ ಕೋರಲಾಗುತ್ತಿದೆ.

for ವ್ಯವಸ್ಥಾಪಕ ನಿರ್ದೇಶಕರು
ಕ.ರಾ.ರ.ಸಾ. ನಿಗಮ

## ಸಂಸ್ಥೆಯ ಆದಾಯ ಹೆಚ್ಚಿಸಲು ಕೈಗೊಂಡ ಕ್ರಮಗಳು

1. ಸಂಸ್ಥೆಯ ವ್ಯಾಪ್ತಿಯಿಂದ ಪಣಜಿ, ಪುಣೆ, ಮುಂಬೈ, ಹೈದ್ರಾಬಾದ, ಕಲಬುರ್ಗಿ, ಬೀದರ, ಬಳ್ಳಾರಿ, ಮೈಸೂರು, ಮಂಗಳೂರು, ಬೆಂಗಳೂರು ಮಾರ್ಗಗಳಲ್ಲಿ ಹಾಗೂ ಹೊಸ ಮಾರ್ಗಗಳಲ್ಲಿ ಪ್ರತಿಷ್ಠಿತ ಸಾರಿಗೆಗಳನ್ನು ಅಳವಡಿಸಿ ಆದಾಯ ಹೆಚ್ಚಿಸಲು ಮೊಬೈಲ್ ಆಪ್ ಮೂಲಕ ಹಾಗೂ ಎಂ-ಬುಕಿಂಗ್, ಇ—ಬುಕಿಂಗ್, ಫ್ರಾಂಚೈಸಿ ಬುಕಿಂಗ್ ಹೆಚ್ಚಿಸಿ, ಹೆಚ್ಚಿನ ಪ್ರಚಾರ ಕೈಗೊಂಡು ಪ್ರೋತ್ಸಾಹಕ ದರ ಮತ್ತು ರಿಯಾಯಿತಿಗಳ ಮಾಹಿತಿಯನ್ನು ಪ್ರಯಾಣಿಕರಿಗೆ ನೀಡಿ ಪ್ರಯಾಣಿಕರನ್ನು ಆಕರ್ಷಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
2. ಸಂಸ್ಥೆಗೆ ಆಗುತ್ತಿರುವ ನಷ್ಟವನ್ನು ಸರಿದೂಗಿಸಲು ದರ ಪರಿಷ್ಕರಣೆಗೆ ಮಾತೃಸಂಸ್ಥೆಯಾದ ಕ.ರಾ.ರ.ಸಾ.ನಿಗಮದಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.
3. ಚಾಲನಾ ಸಿಬ್ಬಂದಿಗಳು ಹಾಗೂ ವಾಹನಗಳ ಲಭ್ಯತೆಯನ್ನಾಧರಿಸಿ, ಸುಮಾರು 100 ಅನುಸೂಚಿಗಳನ್ನು ಹುಬ್ಬಳ್ಳಿ, ಧಾರವಾಡ ಹಾಗೂ ಬೆಳಗಾವಿ ನಗರ ವ್ಯಾಪ್ತಿಯಲ್ಲಿ ನೂತನವಾಗಿ ಕಾರ್ಯಾಚರಿಸಲು ಯೋಜಿಸಲಾಗಿದೆ.
4. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಮತ್ತು ಪ್ರಯಾಣಿಕರ ಬೇಡಿಕೆ, ಕನಿಷ್ಠ ಸಾರಿಗೆ ಸೌಲಭ್ಯವಿರುವ ಹೋಬಳಿ/ ಗ್ರಾಮಗಳಿಗೆ ಸಮರ್ಪಕ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು ಹಾಗೂ ರಸ್ತೆ ಸಂಪರ್ಕವಿಲ್ಲದ ಗ್ರಾಮಗಳ ರಸ್ತೆ ದುರಸ್ತಿಯಾದ ನಂತರ ಕಲ್ಪಿಸುವ ಸಾರಿಗೆಗಳು ಸೇರಿದಂತೆ ಸುಮಾರು 180 ಅನುಸೂಚಿಗಳನ್ನು ಕಾರ್ಯಾಚರಿಸಲು ಯೋಜಿಸಲಾಗಿದೆ.
5. ತಾಲ್ಲೂಕದಿಂದ ತಾಲ್ಲೂಕ ಕೇಂದ್ರಗಳಿಗೆ, ತಾಲ್ಲೂಕ ಕೇಂದ್ರದಿಂದ ಜಿಲ್ಲಾ ಕೇಂದ್ರಗಳಿಗೆ ಹಾಗೂ ಜಿಲ್ಲಾ ಕೇಂದ್ರದಿಂದ ಜಿಲ್ಲಾ ಕೇಂದ್ರಗಳಿಗೆ ಪಾಯಿಂಟ-ಟು-ಪಾಯಿಂಟ ಮಾದರಿಯಲ್ಲಿ ಸುಮಾರು 220 ಅನುಸೂಚಿಗಳನ್ನು ಕಾರ್ಯಾಚರಿಸಲು ಯೋಜಿಸಲಾಗಿದೆ.
6. ಪ್ರಯಾಣಿಕ ಸ್ನೇಹಿಯಾಗಿ ನಗದುರಹಿತ ವಹಿವಾಟನ್ನು ಪ್ರೋತ್ಸಾಹಿಸಲು Prepaid RFID ಕಾರ್ಡ ಬಳಸಿ ಪ್ರಯಾಣಿಸಲು ಬೆಳಗಾವಿ ನಗರದ ಆಯ್ದ ಮಾರ್ಗಗಳಲ್ಲಿ ಹಾಗೂ ಹುಬ್ಬಳ್ಳಿ ವಿಭಾಗದಲ್ಲಿ UPI QR Code ಮೂಲಕ ನಗದುರಹಿತ ವಹಿವಾಟನ್ನು ಪ್ರಾರಂಭಿಸಲಾಗಿದ್ದು, ಗದಗ ಹಾಗೂ ಬೆಳಗಾವಿ ವಿಭಾಗಗಳಿಗೂ ವಿಸ್ತರಿಸಲಾಗಿದೆ. ಇನ್ನುಳಿದ ಘಟಕಗಳಿಗೂ ವಿಸ್ತರಿಸುವ ಕ್ರಮ ಜಾರಿಯಲ್ಲಿದೆ
7. ಸಂಸ್ಥೆಯಲ್ಲಿ ಚಾಲನಾ ಸಿಬ್ಬಂದಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಉತ್ತಮ ಆದಾಯ ತರುವ ನಿಟ್ಟಿನಲ್ಲಿ ಪ್ರಸ್ತುತ 241 ಅನುಸೂಚಿಗಳನ್ನು ನಿರ್ವಾಹಕರಹಿತ ಸಾರಿಗೆಗಳಾಗಿ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುಸೂಚಿಗಳನ್ನು ನಿರ್ವಾಹಕರಹಿತ ಸಾರಿಗೆಗಳಾಗಿ ಕಾರ್ಯಾಚರಣೆ ಮಾಡುವ ಯೋಜನೆ ಇರುತ್ತದೆ.
8. ಕರ್ನಾಟಕ ಮತ್ತು ನೆರೆ ರಾಜ್ಯಗಳಾದ ತೆಲಂಗಾಣ ಹಾಗೂ ಆಂಧ್ರ ಪ್ರದೇಶಗಳೊಂದಿಗೆ ನೂತನ ಪೂರಕ ಅಂತರರಾಜ್ಯ ಸಾರಿಗೆ ಒಪ್ಪಂದ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಅಲ್ಲದೇ ಮಹಾರಾಷ್ಟ್ರ, ಗೋವಾ, ತಮಿಳುನಾಡು ಹಾಗೂ ಗುಜರಾತ ರಾಜ್ಯಗಳ ಜೊತೆಗೆ ನೂತನ ಪೂರಕ ಅಂತರರಾಜ್ಯ ಸಾರಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವ ಪ್ರಸ್ತಾವನೆ ಇರುತ್ತದೆ. ಈ ರಾಜ್ಯಗಳ ಜೊತೆ ಒಪ್ಪಂದವಾದ ನಂತರ ಕರ್ನಾಟಕದಿಂದ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಹಾಗೂ ಹೆಚ್ಚು ಸಾರಿಗೆ ಆದಾಯ ಗಳಿಸಲು ಅವಕಾಶವಾಗುವುದು.
9. ಸಾರ್ವಜನಿಕ ಪ್ರಯಾಣಿಕರು ನಿಲ್ದಾಣವಾರು ವಾಹನಗಳ ನಿರ್ಗಮನಗಳ ಮಾಹಿತಿ ಪಡೆಯಲು ಹುಬ್ಬಳ್ಳಿ-ಧಾರವಾಡ ನಗರ ಸಾರಿಗೆ (ಚಿಗರಿ) ವಾಹನಗಳಲ್ಲಿ ಐ.ಟಿ.ಎಸ್ ತಂತ್ರಾಂಶ ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಸದರಿ ವಾಹನಗಳಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ನಿಲ್ದಾಣವಾರು ಉದ್ಘೋಷಣಾ ವ್ಯವಸ್ಥೆಯನ್ನು ಅಳವಡಿಸಲಾಗಿದೆ.
10. ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಸಂಸ್ಥೆಯ ಪ್ರಮುಖ 60 ಬಸ್ ನಿಲ್ದಾಣಗಳಲ್ಲಿ ವಾಹನ ಸಂಖ್ಯೆ, ನಿರ್ಗಮನ ವೇಳೆ, ತಲುಪುವ ವೇಳೆ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ನೀಡಲಾಗುತ್ತಿದೆ.
11. ಸಂಸ್ಥೆಯ ಪ್ರಮುಖ ಸ್ಥಳಗಳಿಂದ ಬದಾಮಿ, ಐಹೊಳೆ, ಪಟ್ಟದಕಲ್ಲು, ಕೂಡಲಸಂಗಮ, ಜೋಗ್ ಫಾಲ್ಸ್, ಗೋಕಾಕ್ ಫಾಲ್ಸ್ ಕಪ್ಪತಗುಡ್ಡ ಮುಂತಾದ ಪ್ರವಾಸಿ ತಾಣಗಳಿಗೆ ಪ್ಯಾಕೇಜ್ ಟೂರ್ ವ್ಯವಸ್ಥೆಯನ್ನು ನಿರ್ದಿಷ್ಟ ಮಾಹೆಗಳಲ್ಲಿ ನೀಡಲಾಗುತ್ತಿದೆ.
12. ಆದಾಯ ವೃದ್ಧಿಗೆ "ನಮ್ಮ ಕಾರ್ಗೋ" ಪಾರ್ಸಲ್ ಸೇವೆಯನ್ನು ಆರಂಭಿಸಲಾಗಿದೆ.
13. ಸಂಸ್ಥೆಯ ಸಾರಿಗೇತರ ಆದಾಯ (ವಾಣಿಜ್ಯ ಆದಾಯ) ಹೆಚ್ಚಿಸಲು, ಖಾಲಿ ನಿವೇಶನ/ಕಟ್ಟಡಗಳನ್ನು ಬಾಡಿಗೆ ನೀಡಿ ವಾಣಿಜ್ಯ ಆದಾಯ ಹೆಚ್ಚಿಸಲು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.
14. ಬಸ್ಸುಗಳ ಮೇಲೆ ಜಾಹೀರಾತು, ಬಸ್ ನಿಲ್ದಾಣಗಳಲ್ಲಿ ಹೋರ್ಡಿಂಗ್ಸ್ ಅಳವಡಿಕೆ, ಡಿಜಿಟಲ್ ಗ್ಲೋಸ್ಕೈನ್ ಬೋರ್ಡ್, ವಿಡಿಯೋವಾಲ್ ಅಡ್ವರ್ಟೈಜ್‌ಮೆಂಟ್‌ಗಳ ಮೂಲಕ ಆದಾಯ ಹೆಚ್ಚಳಕ್ಕೆ ಕ್ರಮ ವಹಿಸಲಾಗಿದೆ.
15. ಇದಲ್ಲದೇ, ಮಾನವ ಉತ್ಪಾದಕತೆಗೆ ಅಡ್ಡಿಯಾಗುತ್ತಿದ್ದ ಕೆಲವೊಂದು ವಿಷಯಗಳಲ್ಲಿ ತಂತ್ರಾಂಶಗಳನ್ನು ಅಳವಡಿಸಿ ಮಾನವ ಉತ್ಪಾದಕತೆಯನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.
   ಉದಾಹರಣೆಗೆ - 1) ಡ್ಯೂಟಿರೋಟಾ 2) ಗಣಕೀಕೃತ ರಜೆ ವ್ಯವಸ್ಥೆ 3) ಸಾರಿಗೆ ಸ್ಪಂದನ ಗಳನ್ನು ಅಳವಡಿಸಲಾಗಿದೆ.
16. ಬೇಡಿಕೆಯಿರುವ ಮತ್ತು ಲಾಭದಾಯಕ ಮಾರ್ಗಗಳಲ್ಲಿ ಸಾರ್ವಜನಿಕ ಬೇಡಿಕೆ/ಅವಶ್ಯಕತೆಗನುಗುಣವಾಗಿ ಹೆಚ್ಚುವರಿ ಸಾರಿಗೆ ಸೌಲಭ್ಯ ಒದಗಿಸಲಾಗುತ್ತಿದೆ.

ಮುಖ್ಯ ಸಂಚಾರ ವ್ಯವಸ್ಥಾಪಕರು

**ನಿಗಮದ ಆದಾಯವನ್ನು ಹೆಚ್ಚಿಸಲು ಸಂಚಾರ ಇಲಾಖೆಯಿಂದ ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ.**

- ಘಟಕ/ವಿಭಾಗಗಳ ಮಟ್ಟದಲ್ಲಿ ದಿನಂಪ್ರತಿ ಅನುಸೂಚಿವಾರು ಆದಾಯಗಳನ್ನು ಪರಿಶೀಲಿಸಿ, ಕಡಿಮೆ ಆದಾಯ ಬರುವ / ಹೆಚ್ಚಿಗೆ ನಷ್ಟ ಉಂಟು ಮಾಡುವ ಅನುಸೂಚಿಗಳನ್ನು ಪರಿಷ್ಕರಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.
- ಡಬಲ್ ಕ್ರೂ ಅನುಸೂಚಿಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಣೆ ಮಾಡಲಾಗುತ್ತಿದೆ.
- ಅನಧಿಕೃತವಾಗಿ ಕಾರ್ಯಾಚರಣೆಯಲ್ಲಿರುವ ಜೀಪ್, ಕ್ರೂಜರ್ ಮುಂತಾದ ಖಾಸಗಿ ವಾಹನಗಳ ಕಾರ್ಯಾಚರಣೆ ನಿಯಂತ್ರಿಸಲು ಕ್ರಮ ಜರುಗಿಸುವಂತೆ ಕಾಲಕಾಲಕ್ಕೆ ಸರ್ಕಾರದ ಆಯುಕ್ತರಿಗೆ, ಜಿಲ್ಲಾಧಿಕಾರಿಗಳಿಗೆ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ, ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕೋರಲಾಗುತ್ತಿದೆ.
- ಖಾಸಗಿ ವಾಹನಗಳಿಂದ ಪೈಪೋಟಿ ಇರುವ ಮಾರ್ಗಗಳಲ್ಲಿ ಪ್ರೋತ್ಸಾಹದಾಯಕ ಪ್ರಯಾಣ ದರಗಳನ್ನು ಜಾರಿಗೊಳಿಸಿ ಪ್ರಯಾಣಿಕರನ್ನು ನಿಗಮದ ಸಾರಿಗೆಗಳಿಗೆ ಆಕರ್ಷಿಸಲು ಕ್ರಮ ಜರುಗಿಸಲಾಗುತ್ತಿದೆ.
- ಉತ್ತಮ ಆದಾಯ ಬರುವ ಮಾರ್ಗಗಳಲ್ಲಿ ಹೊಸ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
- ಕೆಲವು ಆಯ್ದ ಪ್ರಮುಖ ಮಾರ್ಗಗಳಲ್ಲಿ ಎಸಿ ಸ್ಲೀಪರ್ ಹಾಗೂ ನಾನ್ ಎಸಿ ಸ್ಲೀಪರ್ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
- ಸಾರಿಗೆ ಆದಾಯ ಸೋರಿಕೆಯಾಗದಂತೆ ಮಾರ್ಗ ತನಿಖಾ ಕಾರ್ಯವನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳಲಾಗುತ್ತಿದೆ.
- ಅನುಸೂಚಿಗಳಿಗೆ ಆದಾಯದ ಗುರಿಯನ್ನು ನಿಗದಿಪಡಿಸಿ, ಅದರಂತೆ ಆದಾಯವನ್ನು ಸಂದಾಯವಾಗುವಂತೆ ಸಂಬಂಧಪಟ್ಟ ಸಿಬ್ಬಂದಿಗಳಿಗೆ ತಿಳುವಳಿಕೆ ನೀಡಿ ಆದಾಯ ಹೆಚ್ಚಿಸಲು ಕ್ರಮ ಜರುಗಿಸಲಾಗುತ್ತಿದೆ.
- ವಿಭಾಗ ಮಟ್ಟದಲ್ಲಿ ಭೌತಿಕ ಮತ್ತು ಆರ್ಥಿಕ ಕಾರ್ಯಾಚರಣೆ ಕುರಿತಂತೆ ಘಟಕ ವ್ಯವಸ್ಥಾಪಕರ ಮತ್ತು ಶಾಖಾ ಮುಖ್ಯಸ್ಥರ ವಾರಾಂತ್ಯ ಮತ್ತು ಮಾಸಾಂತ್ಯ ಸಭೆ ನಡೆಸಿ, ಸಾರಿಗೆ ಆದಾಯ ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಖಾಲಿ ಇರುವ ಮಳಿಗೆಗಳಿಗೆ ಟೆಂಡರ್ ಪ್ರಕ್ರಿಯೆ ಸರಳೀಕರಣಗೊಳಿಸಿ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ನಮ್ಮ ಕಾರ್ಗೋ ಅನ್ನು ಪ್ರಾರಂಭಿಸಿ, ಪಾರ್ಸಲ್ & ಕೋರಿಯರ್ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಇದರಿಂದ ನಿಗಮದ ಆದಾಯವನ್ನು ಹೆಚ್ಚಿಸಲು ಕ್ರಮವಹಿಸಲಾಗಿರುತ್ತದೆ.
- ಜಾಹೀರಾತು ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಶಾಲಾ-ಕಾಲೇಜು ಮತ್ತು ಕಾರ್ಖಾನೆಗಳ ಮುಖ್ಯಸ್ಥರಿಗೆ ಪತ್ರ ಬರೆದು ಚಾರ್ಟರ್ಡ್ ಸರ್ವಿಸ್ ಪಡೆದುಕೊಳ್ಳಲು ಕ್ರಮ ಜರುಗಿಸಲಾಗಿರುತ್ತದೆ.
- ನಿಗಮದ ತೆರೆದ ನಿವೇಶನಗಳಲ್ಲಿ ಬಾಡಿಗೆ ಆಧಾರದ ಮೇಲೆ ಇಂಧನ ಬಂಕ ಅಳವಡಿಸಿ ವಾಣಿಜ್ಯ ಆದಾಯ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ತನಿಖಾ ತಂಡಗಳನ್ನು ನಿಯೋಜಿಸಿ, ಪ್ರಯಾಣಿಕರು ಟಿಕೇಟ್ ಪಡೆದಿರುವ ಬಗ್ಗೆ ನಿಯಮಿತವಾಗಿ ತನಿಖೆ ನಡೆಸುವ ಮೂಲಕ ಪ್ರಯಾಣಿಕರಲ್ಲಿ ಜಾಗೃತಿ ಮೂಡಿಸಿ ಎಲ್ಲಾ ಪ್ರಯಾಣಿಕರು ಟಿಕೇಟ್ ಪಡೆದು ಪ್ರಯಾಣಿಸುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ಕೇಂದ್ರ ಕಛೇರಿಯ ಮಟ್ಟದಲ್ಲಿ ವಿಭಾಗಗಳ ಕಾರ್ಯಾಚರಣೆಯ ಅಂಕಿ-ಅಂಶಗಳನ್ನು ಪರಿಶೀಲಿಸಿ, ಆದಾಯ ಹೆಚ್ಚಿಸಲು ವಿಭಾಗಗಳಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಸಮನಾಂತರ ಕಾರ್ಯಾಚರಣೆ ಯನ್ನು ಅಭ್ಯಸಿಸಿ, ಅನುಸೂಚಿಗಳನ್ನು ಪರಿಷ್ಕರಿಸಲು ಆಯಾ ವಿಭಾಗದವರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ.
- ಕೇಂದ್ರ ಕಛೇರಿ ಮಟ್ಟದಲ್ಲಿ ನಡೆಯುವ ಇಲಾಖಾ ಮುಖ್ಯಸ್ಥರ/ವಿಭಾಗೀಯ ನಿಯಂತ್ರಣಾಧಿಕಾರಿ ಗಳ/ವಿಭಾಗೀಯ ಸಂಚಾರ ಅಧಿಕಾರಿಗಳ ಸಭೆಯನ್ನು ಕಾಲಕಾಲಕ್ಕೆ ನಿಗಧಿ ಮಾಡಿ ಅಲ್ಲಿ ಅನುಸೂಚಿಗಳ ಬಗ್ಗೆ ವಿಶ್ಲೇಷಣೆ ಮಾಡಿ ಇತ್ಯಾಧಿಗಳ ಬಗ್ಗೆ ಪರಿಶೀಲಿಸಿ, ಅಗತ್ಯ ಸುಧಾರಣಾ ಕ್ರಮ ಕೈಗೊಳ್ಳುವಂತೆ ವಿಭಾಗೀಯ ಅಧಿಕಾರಿಗಳಿಗೆ ಸೂಕ್ತ ಸಲಹೆ ನೀಡಿ, ಸಾರಿಗೆ ಆದಾಯ ಹೆಚ್ಚಿಸುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ-ಆ

**ಕರಾರಸಾ ನಿಗಮ: ಕೇಂದ್ರ ಕಛೇರಿ: ಬೆಂಗಳೂರು**
**ಸಂಚಾರ (ವಾಣಿಜ್ಯ) ಇಲಾಖೆ**
**ಲಾಜಿಸ್ಟಿಕ್ಸ್ ಶಾಖೆ**
**ಲೈಟ್ ಪಾರ್ಸಲ್ ದರಗಳ ವಿವರಗಳು**

| Discription | Upto 250 Gms | 251-500 gms | 501to 1000 Gms | 1000 Gms and above |
|---|---|---|---|---|
| With in State | Rs. 50/- | Rs. 75/- | Rs. 100/- | Rs. 125/- |
| Inter State | Rs. 75/- | Rs. 100/- | Rs. 125/- | Rs. 150/- |

| up to 250 gms | | | | | |
|---|---|---|---|---|---|
| Distance in Kms | Loading | Unloading | Crew Incentive | Transport charge | Total |
| With in State | 1 | 1 | 5 | 43 | 50 |
| Inter State | 1 | 1 | 5 | 68 | 75 |

| 251-500 gms | | | | | |
|---|---|---|---|---|---|
| Distance in Kms | Loading | Unloading | Crew Incentive | Transport charge | Total |
| With in State | 1 | 1 | 5 | 68 | 75 |
| Inter State | 1 | 1 | 5 | 93 | 100 |

| 501-1000 gms | | | | | |
|---|---|---|---|---|---|
| Distance in Kms | Loading | Unloading | Crew Incentive | Transport charge | Total |
| With in State | 1 | 1 | 5 | 93 | 100 |
| Inter State | 1 | 1 | 5 | 118 | 125 |

| 1000gms and above (1500 grams) | | | | | |
|---|---|---|---|---|---|
| Distance in Kms | Loading | Unloading | Crew Incentive | Transport charge | Total |
| With in State | 1 | 1 | 5 | 118 | 125 |
| Inter State | 1 | 1 | 5 | 143 | 150 |

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ)
ಕ.ರಾ.ರ.ಸಾ.ನಿ. ಕೇಂದ್ರ ಕಛೇರಿ
ಬೆಂಗಳೂರು-560 027

ಕರಾರಸಾ ನಿಗಮ: ಕೇಂದ್ರ ಕಛೇರಿ: ಬೆಂಗಳೂರು
ಸಂಚಾರ (ವಾಣಿಜ್ಯ) ಇಲಾಖೆ
ಲಾಜಿಸ್ಟಿಕ್ಸ್ ಶಾಖೆ
ಪೆರಿಶೆಬಲ್/ಸಾಮ್ಯಾನ ಲಗೇಜ್ ದರಗಳ ವಿವರಗಳು

| 2-10 Kgs Slab tariff in Rs. | | | | | |
|---|---|---|---|---|---|
| Kms | Loading | Unloading | Crew Incentive | Transport charge | Total |
| 0-50 | 5 | 5 | 5 | 15 | 30 |
| 51-100 | 5 | 5 | 5 | 25 | 40 |
| 101-200 | 5 | 5 | 6 | 34 | 50 |
| 201-300 | 5 | 5 | 8 | 47 | 65 |
| 301- 400 | 5 | 5 | 10 | 55 | 75 |
| 401- 500 | 5 | 5 | 11 | 74 | 95 |
| 501- 600 | 5 | 5 | 12 | 83 | 105 |
| 601- 700 | 5 | 5 | 13 | 92 | 115 |
| 701- 800 | 5 | 5 | 14 | 101 | 125 |
| 801- 900 | 5 | 5 | 15 | 105 | 130 |
| 901- 1000 | 5 | 5 | 16 | 114 | 140 |
| > 1000 | 5 | 5 | 17 | 123 | 150 |

| 11-20 Kgs Slab tariff in Rs. | | | | | |
|---|---|---|---|---|---|
| Kms | Loading | Unloading | Crew Incentive | Transport charge | Total |
| 0-50 | 5 | 5 | 5 | 15 | 30 |
| 51-100 | 5 | 5 | 7 | 23 | 40 |
| 101-200 | 5 | 5 | 9 | 46 | 65 |
| 201-300 | 5 | 5 | 9 | 66 | 85 |
| 301- 400 | 5 | 5 | 14 | 61 | 85 |
| 401- 500 | 5 | 5 | 14 | 106 | 130 |
| 501- 600 | 5 | 5 | 14 | 106 | 130 |
| 601- 700 | 5 | 5 | 14 | 106 | 130 |
| 701- 800 | 5 | 5 | 19 | 146 | 175 |
| 801- 900 | 5 | 5 | 19 | 146 | 175 |
| 901- 1000 | 5 | 5 | 19 | 146 | 175 |
| > 1000 | 5 | 5 | 19 | 146 | 175 |

| 21 to 30 Kgs Slab tariff in Rs. | | | | | |
|---|---|---|---|---|---|
| Kms | Loading | Unloading | Crew Incentive | Transport charge | Total |
| 0-50 | 10 | 10 | 6 | 24 | 50 |
| 51-100 | 10 | 10 | 6 | 44 | 70 |
| 101-200 | 10 | 10 | 9 | 46 | 75 |
| 201-300 | 10 | 10 | 11 | 69 | 100 |
| 301- 400 | 10 | 10 | 12 | 93 | 125 |
| 401- 500 | 10 | 10 | 13 | 106 | 140 |
| 501- 600 | 10 | 10 | 13 | 107 | 140 |
| 601- 700 | 10 | 10 | 18 | 107 | 145 |
| 701- 800 | 10 | 10 | 19 | 146 | 185 |
| 801- 900 | 10 | 10 | 20 | 150 | 190 |
| 901- 1000 | 10 | 10 | 20 | 155 | 195 |
| > 1000 | 10 | 10 | 20 | 155 | 195 |

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ)
ಕ.ರಾ.ರ.ಸಾ.ನಿ. ಕೇಂದ್ರ ಕಛೇರಿ
ಬೆಂಗಳೂರು-560 027

| 31 to 40 Kgs Slab tariff in Rs. | | | | | |
|---|---|---|---|---|---|
| Kms | Loading | Unloading | Crew Incentive | Transport charge | Total |
| 0-50 | 10 | 10 | 6 | 24 | 50 |
| 51-100 | 10 | 10 | 7 | 43 | 70 |
| 101-200 | 10 | 10 | 10 | 55 | 85 |
| 201-300 | 10 | 10 | 12 | 78 | 110 |
| 301- 400 | 10 | 10 | 14 | 106 | 140 |
| 401- 500 | 10 | 10 | 15 | 115 | 150 |
| 501- 600 | 10 | 10 | 15 | 115 | 150 |
| 601- 700 | 10 | 10 | 19 | 126 | 165 |
| 701- 800 | 10 | 10 | 20 | 155 | 195 |
| 801- 900 | 10 | 10 | 21 | 169 | 210 |
| 901- 1000 | 10 | 10 | 21 | 184 | 225 |
| > 1000 | 10 | 10 | 21 | 184 | 225 |

| 41 to 50 Kgs Slab tariff in Rs. | | | | | |
|---|---|---|---|---|---|
| Kms | Loading | Unloading | Crew Incentive | Transport charge | Total |
| 0-50 | 10 | 10 | 6 | 24 | 50 |
| 51-100 | 10 | 10 | 7 | 43 | 70 |
| 101-200 | 10 | 10 | 10 | 60 | 90 |
| 201-300 | 10 | 10 | 13 | 87 | 120 |
| 301- 400 | 10 | 10 | 14 | 126 | 160 |
| 401- 500 | 10 | 10 | 15 | 135 | 170 |
| 501- 600 | 10 | 10 | 16 | 144 | 180 |
| 601- 700 | 10 | 10 | 16 | 144 | 180 |
| 701- 800 | 10 | 10 | 21 | 164 | 205 |
| 801- 900 | 10 | 10 | 22 | 183 | 225 |
| 901- 1000 | 10 | 10 | 22 | 208 | 250 |
| > 1000 | 10 | 10 | 22 | 208 | 250 |

| 51 to 60 Kgs Slab tariff in Rs. | | | | | |
|---|---|---|---|---|---|
| Kms | Loading | Unloading | Crew Incentive | Transport charge | Total |
| 0-50 | 10 | 10 | 6 | 44 | 70 |
| 51-100 | 10 | 10 | 8 | 67 | 95 |
| 101-200 | 10 | 10 | 11 | 104 | 135 |
| 201-300 | 10 | 10 | 14 | 126 | 160 |
| 301- 400 | 10 | 10 | 15 | 165 | 200 |
| 401- 500 | 10 | 10 | 16 | 179 | 215 |
| 501- 600 | 10 | 10 | 17 | 188 | 225 |
| 601- 700 | 10 | 10 | 17 | 188 | 225 |
| 701- 800 | 10 | 10 | 22 | 198 | 240 |
| 801- 900 | 10 | 10 | 24 | 226 | 270 |
| 901- 1000 | 10 | 10 | 24 | 241 | 285 |
| > 1000 | 10 | 10 | 24 | 241 | 285 |

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ)
ಕ.ರಾ.ರ.ಸಾ.ನಿ. ಕೇಂದ್ರ ಕಛೇರಿ
ಬೆಂಗಳೂರು-560 027

| 61 to 70 Kgs Slab tariff in Rs. | | | | | |
|---|---|---|---|---|---|
| Kms | Loading | Unloading | Crew Incentive | Transport charge | Total |
| 0-50 | 10 | 10 | 6 | 44 | 70 |
| 51-100 | 10 | 10 | 8 | 67 | 95 |
| 101-200 | 10 | 10 | 11 | 129 | 160 |
| 201-300 | 10 | 10 | 15 | 150 | 185 |
| 301- 400 | 10 | 10 | 16 | 194 | 230 |
| 401- 500 | 10 | 10 | 17 | 203 | 240 |
| 501- 600 | 10 | 10 | 18 | 212 | 250 |
| 601- 700 | 10 | 10 | 20 | 220 | 260 |
| 701- 800 | 10 | 10 | 23 | 232 | 275 |
| 801- 900 | 10 | 10 | 25 | 260 | 305 |
| 901- 1000 | 10 | 10 | 25 | 275 | 320 |
| > 1000 | 10 | 10 | 25 | 275 | 320 |

| 71 to 80 Kgs Slab tariff in Rs. | | | | | |
|---|---|---|---|---|---|
| Kms | Loading | Unloading | Crew Incentive | Transport charge | Total |
| 0-50 | 15 | 15 | 7 | 53 | 90 |
| 51-100 | 15 | 15 | 9 | 81 | 120 |
| 101-200 | 15 | 15 | 12 | 143 | 185 |
| 201-300 | 15 | 15 | 16 | 169 | 215 |
| 301- 400 | 15 | 15 | 18 | 207 | 255 |
| 401- 500 | 15 | 15 | 19 | 221 | 270 |
| 501- 600 | 15 | 15 | 19 | 226 | 275 |
| 601- 700 | 15 | 15 | 21 | 239 | 290 |
| 701- 800 | 15 | 15 | 24 | 256 | 310 |
| 801- 900 | 15 | 15 | 26 | 279 | 335 |
| 901- 1000 | 15 | 15 | 26 | 299 | 355 |
| > 1000 | 15 | 15 | 26 | 299 | 355 |

| 81 to 90 Kgs Slab tariff in Rs. | | | | | |
|---|---|---|---|---|---|
| Kms | Loading | Unloading | Crew Incentive | Transport charge | Total |
| 0-50 | 15 | 15 | 7 | 63 | 100 |
| 51-100 | 15 | 15 | 11 | 79 | 120 |
| 101-200 | 15 | 15 | 14 | 171 | 215 |
| 201-300 | 15 | 15 | 18 | 192 | 240 |
| 301- 400 | 15 | 15 | 20 | 230 | 280 |
| 401- 500 | 15 | 15 | 21 | 244 | 295 |
| 501- 600 | 15 | 15 | 21 | 254 | 305 |
| 601- 700 | 15 | 15 | 23 | 267 | 320 |
| 701- 800 | 15 | 15 | 26 | 279 | 335 |
| 801- 900 | 15 | 15 | 28 | 307 | 365 |
| 901- 1000 | 15 | 15 | 28 | 322 | 380 |
| > 1000 | 15 | 15 | 28 | 322 | 380 |

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ)
ಕ.ರಾ.ರ.ಸಾ.ನಿ. ಕೇಂದ್ರ ಕಛೇರಿ
ಬೆಂಗಳೂರು-560 027

| 91 to 100 Kgs Slab tariff in Rs. | | | | | |
|---|---|---|---|---|---|
| Kms | Loading | Unloading | Crew Incentive | Transport charge | Total |
| 0-50 | 15 | 15 | 7 | 63 | 100 |
| 51-100 | 15 | 15 | 13 | 77 | 120 |
| 101-200 | 15 | 15 | 16 | 194 | 240 |
| 201-300 | 15 | 15 | 20 | 220 | 270 |
| 301- 400 | 15 | 15 | 22 | 258 | 310 |
| 401- 500 | 15 | 15 | 23 | 267 | 320 |
| 501- 600 | 15 | 15 | 23 | 277 | 330 |
| 601- 700 | 15 | 15 | 25 | 290 | 345 |
| 701- 800 | 15 | 15 | 28 | 307 | 365 |
| 801- 900 | 15 | 15 | 30 | 330 | 390 |
| 901- 1000 | 15 | 15 | 30 | 350 | 410 |
| > 1000 | 15 | 15 | 30 | 350 | 410 |

ನೋಟ್-1. ಹಾಳಾಗುವ ಸರಕುಗಳಿಗೆ ಇನ್ಸುರೆನ್ಸ್/ ವಿಮೆ ಹಿಂದಿನಂತೆ ತೆಗೆದುಹಾಕಲಾಗಿರುತ್ತದೆ.

2. ಸಾಮಾನ್ಯ ಲಗೇಜ್ ಗಳಿಗೆ ಈ ಹಿಂದಿನಂತೆ ಇನ್ಸುರೆನ್ಸ್ ದರ ಚಾಲ್ತಿಯಲ್ಲಿರುತ್ತದ.

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ)
ಕ.ರಾ.ರ.ಸಾ.ನಿ. ಕೇಂದ್ರ ಕಛೇರಿ
ಬೆಂಗಳೂರು-560 027